



ಬೀಹೈವ್ ಮತ್ತು ರಿವರ್ ಸೈಡ್ ಚಿಲುಮೆಗಳೂ ಪ್ರವಾಸಿಗರ ಕಣ್ಮನ ತುಂಬುತ್ತವೆ. ಇಲ್ಲೊಂದು ಪ್ರವಾಸಿಗರ ಮಾರ್ಗದರ್ಶನ ಕೇಂದ್ರ ಹಾಗೂ ಓಲ್ಡ್ ಫೈತ್‌ಫುಲ್ ಇನ್ ಎಂಬ ಛತ್ರವೂ ಇದೆ. ಅದರಲ್ಲಿ 327 ಕೋಣೆಗಳಿವೆ. ಇಲ್ಲಿ ಕೋಣೆ ಕಾಯ್ದಿರಿಸಲು ವರ್ಷಕ್ಕೂ ಮುಂಚೆ ಕಾಯಬೇಕಂತೆ!

ಯಲ್ಲೋ ಸ್ಟೋನ್‌ನ ಗ್ರಾಂಡ್ ಕ್ಯಾನ್ಯನ್, ಅರಿಝೋನಾದ ಗ್ರಾಂಡ್ ಕ್ಯಾನ್ಯನ್‌ಗಿಂತ ವಿಸ್ತಾರದಲ್ಲಿ ಚಿಕ್ಕದಿದ್ದರೂ ಚೇತೋಹಾರಿಯಾಗಿದೆ. ಇಲ್ಲಿನ ಲೋಯರ್ ಫಾಲ್ಸ್ 308 ಅಡಿ ಎತ್ತರದಿಂದ ಧುಮುಕುವ ನೋಟ ನಯನ ಮನೋಹರ. ಅಪ್ಪರ್ ಫಾಲ್ಸ್‌ನಿಂದ ಲೋಯರ್ ಫಾಲ್ಸ್‌ನ ದೂರ ಸುಮಾರು 30 ಮೈಲಿ. ಆಳ 800ರಿಂದ 1200 ಅಡಿ. ಕ್ಯಾನ್ಯನ್ ವಿಲೇಜ್ ಸಂಕೀರ್ಣದಲ್ಲಿ ವ್ಯವಸ್ಥಿತ ವಿಸಿಟರ್ ಸೆಂಟರ್ ಮತ್ತು ಫುಡ್ ಕೋರ್ಟ್‌ಗಳಿವೆ.

ಹಾಯ್ಡೆನ್ ವ್ಯಾಲಿಯ ವಿಶಾಲ ಕಣಿವೆಯ ಅಚ್ಚ ಹಸಿರ ಹುಲ್ಲುಗಾವಲಿನಲ್ಲಿ ಜನನಿಬಿಡ ಮಾರ್ಗದುದ್ದಕ್ಕೂ ಕಾರಿನಲ್ಲಿ ಹೋಗುತ್ತಿದ್ದರೆ, ವನ್ಯಮೃಗಗಳ ನಿರ್ಭಯ ಓಡಾಟವನ್ನೂ ನೋಡಬಹುದು. ಕಾಡುಕೋಣ, ಕರಡಿ, ಸಾರಂಗ, ನರಿಗಳ ಸ್ವಚ್ಛಂದ ಸ್ವಭಾವಗಳನ್ನು ಕ್ಯಾಮರಾಗಳಲ್ಲಿ ಸೆರೆಹಿಡಿಯಬಹುದು. ಪ್ರಶಾಂತ ಯಲ್ಲೋ ಸ್ಟೋನ್ ನದಿಯಲ್ಲಿ ಈಜಾಡುವ ನೀರುಕೋಳಿಗಳು, ಕಾದಾಡುವ ಕಾಡುಕೋಣ ಗಳನ್ನು ಮಾರ್ಗದುದ್ದಕ್ಕೂ ವೀಕ್ಷಿಸಬಹುದು .ಆಹ್ಲಾದಕರ ತಗ್ಗು ಕಣಿವೆಯ ವಿಶಾಲದ ದೃಶ್ಯ ನಿಜಕ್ಕೂ ನಯನ ಮೋಹಕ.

**ಮಿಡ್ ವೆ ಗೇಸರ್ ಬೇಸಿನ್:** ಯೆಲ್ಲೋ ಸ್ಟೋನ್‌ನ 'ದ ಗ್ರಾಂಡ್ ಪ್ರಿಸ್ಮಾಟಿಕ್' ಬಿಸಿನೀರಿನ ಬುಗ್ಗೆ ಇಡೀ ಅಮೆರಿಕದಲ್ಲೇ ಅತಿದೊಡ್ಡ ಬಿಸಿ ನೀರಿನ ಊಟೆ. ವಿಶ್ವದಲ್ಲಿಯೇ ಇದು ಮೂರನೇ ಅತಿ ದೊಡ್ಡ ಬಿಸಿನೀರ ಬುಗ್ಗೆ. ಸುಮಾರು 160 ಅಡಿ ಆಳದ ಕೆಂಪು, ಕಿತ್ತಳೆ, ಹಳದಿ, ಹಸಿರು ಮತ್ತು ನೀಲಿ ಬಣ್ಣಗಳಿಂದ ಕೂಡಿದ್ದು ಕಾಮನಬಿಲ್ಲಿನ ಬಣ್ಣಗಳನ್ನು ಹೋಲುತ್ತದೆ. ಈ ಆಕರ್ಷಕ ನೋಟ ಕಾಣಬೇಕೆಂದರೆ ಕೊಳ್ಳದ ಮೇಲೆ ಹಾಯುವ ಹಬೆ ಇಲ್ಲವಾಗುವ ಸಮಯಕ್ಕೆ ಕಾಯಬೇಕು. ಗಾಳಿ ಬೀಸಿದಂತೆ ಕೊಳ್ಳವು



ಹೊಗೆಯಿಂದ ಮುಚ್ಚಿಬಿಡುತ್ತದೆ.

ಮ್ಯಾಮತ್ ಹಾಟ್ ಸ್ಪ್ರಿಂಗ್ ಇಲ್ಲಿನ ಅತ್ಯಂತ ಪ್ರಮುಖ ಆಕರ್ಷಣೆ. ಈ ಪಾರ್ಕ್‌ನ ಉಳಿದ ಉಷ್ಣಪ್ರದೇಶಕ್ಕಿಂತ ವಿಭಿನ್ನವಾದ ಅನುಭವವನ್ನು ಕಟ್ಟಿ ಕೊಡುತ್ತದೆ. ಬಿಸಿನೀರು ಚಿಮ್ಮುವಿಕೆಯಿಂದ ಬಂಡೆಗಳು ಕರಗಿ ಸುಣ್ಣದ ಖನಿಜ ನಿರಿಂದ್ರಿಯ ಶೇಖರಣೆಯಾಗಿ ಮತ್ತು ಆಳವಾದ ಅಗ್ನಿಪರ್ವತ, ಜ್ವಾಲಾಮುಖಿಗಳು ಭೂ ಗರ್ಭದಿಂದ ಉತ್ಪನ್ನವಾಗಿ ಸುಣ್ಣದ ಖನಿಜ ನಿರಿಂದ್ರಿಯ ದ್ರವ್ಯಗಳು ಮಾಳಿಗೆಯಂತೆ ಅಥವಾ ಜಗಲಿ ಯಾನೆ ಕಟ್ಟೆಗಳಂತೆ ಬಹು ಸುಂದರ ರೂಪವನ್ನು ತಾಳುತ್ತದೆ. ಟೆರೇಸ್ ಮೌಂಟನ್ ಎಂದು ಕರೆಯಲ್ಪಡುವ ಮಿನಿರ್ವ ಟೆರೇಸ್ ಮತ್ತು ಕ್ಲಿಯೋಪಾತ್ರ ಟೆರೇಸ್ ಮನಸ್ಸನ್ನು ಅರಳಿಸುತ್ತದೆ. ನೋಡುತ್ತಾ ಕುಳಿತರೆ ಇಲ್ಲಿಂದ ಕಾಲ್ತೆಗೆಯುವುದು ಬಹು ಕಷ್ಟ.

**ಯೆಲ್ಲೋ ಸ್ಟೋನ್ ಲೇಕ್:** ಸಮುದ್ರ ಮಟ್ಟಕ್ಕಿಂತ ಬಹು ಎತ್ತರದಲ್ಲಿರುವ